PRAMC
EIC
SE-1
SE-2
DS
EE
AEE-1
AEE-2
AEE-3

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:–2021–22 ನೇ ಸಾಲಿಗೆ Internal & External Budgetary Resources (IEBR) ಅಡಿಯಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಅವಧಿ ಸಾಲಗಳ (Term Loan) ಮೂಲಕ ರೂ.350.00 ಕೋಟಿಗಳ ಹಣ ಸಂಗ್ರಹಿಸಲು ಹಾಗೂ ಸರ್ಕಾರಿ ಖಾತರಿಗೆ ಅನುಮೋದನೆ ನೀಡುವ ಕುರಿತು.

ಓದಲಾಗಿದೆ:–1. ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಡಿಸಿಎಲ್ ರವರ ಪತ್ರ ಸಂಖ್ಯೆ: ಕರಅನಿನಿ/ಲೆ.ಶಾ/04/ಲೆ.ಅ–2/ಅವಧಿ ಸಾಲ/2021–22/1134, ದಿನಾಂಕ: 19–08–2021.

2. ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಡಿಸಿಎಲ್ ರವರ ಪತ್ರ ಸಂಖ್ಯೆ: ಕರಅನಿನಿ/ವ್ಯನಿ/ಸಿಎಫ್‌ಒ/Term Loan/2021–22/3188, ದಿನಾಂಕ: 09–02–2022.

* * *

upload to web

AE-3

**ಪ್ರಸ್ತಾವನೆ:**

2017–18ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಬೆಂಗಳೂರಿನ ಸುತ್ತಮುತ್ತಲಿನ ಸುಮಾರು 150 ಕಿಮೀ ಉದ್ದದ ರಸ್ತೆಗಳನ್ನು ಅಂದಾಜು ಮೊತ್ತ ರೂ. 1455 ಕೋಟಿಗಳ ಮೊತ್ತದಲ್ಲಿ ಅಭಿವೃದ್ಧಿಪಡಿಸಲಾಗುವುದು ಎಂದು ಘೋಷಣೆ ಮಾಡಿರುತ್ತಾರೆ. ಅದರಂತೆ, ಬೆಂಗಳೂರಿನ ಸುತ್ತಮುತ್ತಲಿನ ಒಟ್ಟು 155 ಕಿಮೀ ಉದ್ದದ 04 ರಸ್ತೆ ಕಾಮಗಾರಿಗಳನ್ನು ರೂ. 2095.00 ಕೋಟಿಗಳ ಮೊತ್ತದಲ್ಲಿ ಕೆಆರ್‌ಡಿಸಿಎಲ್ ವತಿಯಿಂದ ನಿರ್ಮಾಣ ಮಾಡಲಾಗುತ್ತಿದೆ. 04 ರಸ್ತೆಗಳ ವಿವರಗಳು ಈ ಕೆಳಗಿನಂತಿದೆ:

1. ಹೊಸಕೋಟೆ–ಬೂದಿಗೆರೆ–ಮೈಲನಹಳ್ಳಿ–ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆ.
2. ನೆಲಮಂಗಲ–ಮಧುರೆ–ಬ್ಯಾತ ರಸ್ತೆ.
3. ಆನೇಕಲ್–ಅತ್ತಿಬೆಲೆ–ಸರ್ಜಾಪುರ–ವರ್ತೂರು–ವೈಟ್‌ಫೀಲ್ಡ್–ಹೊಸಕೋಟೆ ರಸ್ತೆ.
4. ಹಾರೋಹಳ್ಳಿ–ಉರುಗನದೊಡ್ಡಿ–ಕೆಐಎಡಿಬಿ ಕೈಗಾರಿಕಾ ಪ್ರದೇಶ–ಜಿಗಣಿ–ಆನೇಕಲ್ ರಸ್ತೆ.

1644
29/3/2022

ಈ ಯೋಜನೆಗೆ ಅವಶ್ಯಕವಾಗಿರುವ ಒಟ್ಟಾರೆ ರೂ.2095.00 ಕೋಟಿಗಳ ಮೊತ್ತದಲ್ಲಿ ಶೇ. 50 ರಷ್ಟು ಸರ್ಕಾರದ ಅನುದಾನದಿಂದ ಹಾಗೂ ಶೇ. 50 ರಷ್ಟು ಕೆಆರ್‌ಡಿಸಿಎಲ್ ಸಂಸ್ಥೆಯು ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಯೋಜಿಸಿದೆ. ಸದರಿ ಸಾಲವನ್ನು ಮರುಪಾವತಿಸಲು ಕೆಆರ್‌ಡಿಸಿಎಲ್ ಸಂಸ್ಥೆಯು ಟೋಲ್ ಸಂಗ್ರಹಣೆಯಿಂದ ಬರುವ ಸಂಪನ್ಮೂಲದಿಂದ ಶೇ. 50 ರಷ್ಟು ಸಾಲ ಹಾಗೂ ಬಡ್ಡಿಯನ್ನು ಇನ್ನುಳಿದ ಶೇ. 50 ರಷ್ಟು ಸಾಲ ಹಾಗೂ ಬಡ್ಡಿಯನ್ನು ರಾಜ್ಯ ಸರ್ಕಾರದಿಂದ ಮರುಪಾವತಿಸಲಾಗುವುದು.

. . . . . 2

2021–22 ನೇ ಸಾಲಿನ ಆರ್ಥಿಕ ವರ್ಷದಲ್ಲಿ ರೂ. 350.00 ಕೋಟಿಗಳನ್ನು ಸಂಗ್ರಹಿಸಲು ಪ್ರಸ್ತಾವನೆಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 22–10–2021 ರಂದು ನಡೆದ Off Budget Borrowing Monitoring Committee (OBBMC) ಸಭೆಯಲ್ಲಿ ಮಂಡಿಸಲಾಗಿದ್ದು, ಸದರಿ ಸಮಿತಿಯು IEBR ಅಡಿಯಲ್ಲಿ ರೂ. 350.00 ಕೋಟಿಗಳನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು ಅವಧಿ ಸಾಲಗಳ ಮೂಲಕ ಬ್ಯಾಂಕ್‌ಗಳಿಂದ ಸಂಗ್ರಹಿಸಲು ಅನುಮೋದನೆ ನೀಡಿರುತ್ತದೆ.

ಬೆಂಗಳೂರು ಸುತ್ತಮುತ್ತಲಿನ ಒಟ್ಟು 155 ಕಿಮೀ ಉದ್ದದ 04 ರಸ್ತೆ ಕಾಮಗಾರಿಗಳನ್ನು ರೂ. 2095.00 ಕೋಟಿಗಳ ಮೊತ್ತದಲ್ಲಿ ಕೆಆರ್‌ಡಿಸಿಎಲ್ ವತಿಯಿಂದ ನಿರ್ಮಾಣ ಮಾಡಲು 2021–22 ನೇ ಸಾಲಿಗೆ **IEBR** ಅಡಿಯಲ್ಲಿ ಕರ್ನಾಟಕ ರಸ್ತೆ ಅಬಿವೃದ್ಧಿ ನಿಗಮ ನಿಯಮಿತಕ್ಕೆ ಅವಧಿ ಸಾಲಗಳ ಮೂಲಕ ರೂ.350.00 ಕೋಟಿಗಳ ಹಣವನ್ನು ಕೆನರಾ ಬ್ಯಾಂಕ್‌ನಿಂದ ಸಂಗ್ರಹಿಸಲು ಹಾಗೂ ಸರ್ಕಾರಿ ಖಾತರಿಗೆ ಅನುಮೋದನೆ ನೀಡುವ ಪ್ರಸ್ತಾವನೆಗೆ ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಡಿಸಿಎಲ್ ರವರು ಅನುಮೋದನೆಯನ್ನು ನೀಡುವಂತೆ ಕೋರಿ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕುಷವಾಗಿ ಪರಿಶೀಲಿಸಲಾಗಿದ್ದು, ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಲೋಇ ಇ–231 ಇಎಪಿ 2021, ಬೆಂಗಳೂರು, ದಿನಾಂಕ: 18–03–2022**

1. 2021–22 ನೇ ಸಾಲಿಗೆ Internal & External Budgetary Resources (IEBR) ಅಡಿಯಲ್ಲಿ ಕರ್ನಾಟಕ ರಸ್ತೆ ಅಬಿವೃದ್ಧಿ ನಿಗಮ ನಿಯಮಿತಕ್ಕೆ ಅವಧಿ ಸಾಲಗಳ (Term Loan) ಮೂಲಕ ರೂ.350.00 ಕೋಟಿಗಳ ಹಣ ಸಂಗ್ರಹಿಸಲು ಅನುಮೋದನೆ ಹಾಗೂ ಸರ್ಕಾರಿ ಖಾತರಿಗೆ ಈ ಕೆಳಗಿನ ಷರತ್ತು ಹಾಗೂ ನಿಬಂಧನೆಗೆ ಒಳಪಟ್ಟು ಅನುಮೋದನೆಯನ್ನು ನೀಡಲಾಗಿದೆ.

   - ಶೇ.1 ರಂತೆ ಖಾತರಿ ಕಮೀಷನ್ + ಜಿಎಸ್‌ಟಿಯನ್ನು ನಿಗಮವು ಸರ್ಕಾರಕ್ಕೆ ಪಾವತಿಸಲು ಸರ್ಕಾರಿ ಖಾತರಿಯನ್ನು ನೀಡಲು

   - ಬೇಷರತ್ತು ರದ್ದುಗೊಳಿಸಲಾಗದ, ಹಿಂಪಡೆಯಲಾಗದ ಸರ್ಕಾರದ ಖಾತರಿಯನ್ನು ಅವಧಿ ಸಾಲಗಳ ಮರುಪಾವತಿ ಮತ್ತು ಬಡ್ಡಿ ಪಾವತಿಯವರೆಗೆ ನೀಡುವುದಕ್ಕೆ ಹಾಗೂ ಒಂದುವೇಳೆ ಸಾಲಗಳನ್ನು ಮರುಹೊಂದಾಣಿಕೆ ಮಾಡಿದಂತಹ ಸಂದರ್ಭದಲ್ಲಿಯೂ ಕೂಡ ಸರ್ಕಾರದ ಖಾತರಿಯನ್ನು ಮುಂದುವರೆಸಲು.

   - ಅವಧಿ ಸಾಲ ನೀಡುವ ಸಂಸ್ಥೆಗಳು, ನಿಗಮ ಮತ್ತು ಸರ್ಕಾರದ ನಡುವೆ ತ್ರಿಪಕ್ಷೀಯ ಒಪ್ಪಂದ, (Tripartite Agreement) ಭರವಸೆ ದಸ್ತಾವೇಜು (Trust Deed) ಅಥವಾ ಸಾಲಗಳ ಒಪ್ಪಂದ (Loan Agreement) ಮಾಡಿಕೊಳ್ಳಲು.

- ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಿಂದ ಸಂಗ್ರಹಿಸುವ ಅವಧಿ ಸಾಲಗಳ ಮೇಲಿನ ಬಡ್ಡಿ ಪಾವತಿಗೆ ಹಾಗೂ ಸಾಲಗಳ ಮರುಪಾವತಿಗೆ ಸರ್ಕಾರದಿಂದ ಅನುದಾನ ಒದಗಿಸುವುದಕ್ಕೆ ಹಾಗೂ ಈ ಹಣವನ್ನು ನಿಗಮದ ಎಸ್ಕ್ರೋ ಖಾತೆಗೆ ವಾಯಿದೆಯ ದಿನಕ್ಕೆ ಹದಿನೈದು ದಿನಗಳ ಮುಂಚಿತವಾಗಿ ಬಿಡುಗಡೆ ಮಾಡಲು.

- ಅವಧಿ ಸಾಲ ನೀಡುವ ಸಂಸ್ಥೆಗಳ ಪರವಾಗಿ ನಿಗಮದ ಆಸ್ತಿಗಳನ್ನು ಅಡಮಾನವಾಗಿಡಲು ಹಾಗೂ ಒಂದು ವೇಳೆ ಸ್ಟ್ಯಾಂಪ್‌ಗಳ ಮೇಲಿನ ಶುಲ್ಕವನ್ನು ಮನ್ನಾ ಮಾಡಲು ಸಾಧ್ಯವಿಲ್ಲದಂತಹ ಸಂದರ್ಭದಲ್ಲಿ ಸ್ಟ್ಯಾಂಪ್‌ಗಳ ಮೇಲಿನ ಶುಲ್ಕವನ್ನು ಪಾವತಿ ಮಾಡಲು ಬೇಕಾಗುವಂತಹ ಹಣವನ್ನು ಬಿಡುಗಡೆ ಮಾಡಲು.

2. ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 248 ಆಕೋ-2/2021 (ಇ-ಆಫೀಸ್), ದಿನಾಂಕ: 09-02-2022 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

18/3/2022

(ರಾಮಚಂದ್ರಪ್ಪ ಕೆ.ವನ್)
ಸರ್ಕಾರದ ಅಧೀನ ಕಾರ್ಯದರ್ಶಿ
ಬಾಹ್ಯ ಅನುದಾನಿತ ಯೋಜನೆಗಳು (ಇಎಪಿ)
ಲೋಕೋಪಯೋಗಿ ಇಲಾಖೆ

ಗೆ,
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ರವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು.

ಪ್ರತಿಯನ್ನು :-

1. ಮಹಾಲೇಖಪಾಲರು (ಅಕೌಂಟ್ಸ್) ಕರ್ನಾಟಕ, ಬೆಂಗಳೂರು.
2. ಸನ್ಮಾನ್ಯ ಮುಖ್ಯ ಮಂತ್ರಿಯವರ ಅಪರ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು ರವರಿಗೆ ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೆ ತರಲು.
3. ಮಾನ್ಯ ಲೋಕೋಪಯೋಗಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು ರವರಿಗೆ ಮಾನ್ಯ ಸಚಿವರ ಗಮನಕ್ಕೆ ತರಲು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಸರ್ಕಾರದ ಅಪರ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
8. ಸರ್ಕಾರದ ಜಂಟಿ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನ ಸೌಧ ಬೆಂಗಳೂರು ದಿನಾಂಕ 10-03-2022 ರ ಪ್ರಕರಣ ಸಂಖ್ಯೆ ಸಿ: 138/2022 ರ ಪ್ರಕಾರ ಹೊರಡಿಸಿ ಕಳುಹಿಸಲಾಗಿದೆ.
9. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ, (ಆರ್ಥಿಕ ಕೋಶ) ಲೋಕೋಪಯೋಗಿ ಇಲಾಖೆ, ವಿಧಾನಸೌಧ, ಬೆಂಗಳೂರು.

10. ಆಂತರಿಕ ಆರ್ಥಿಕ ಸಲಹೆಗಾರರು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
11. ಸರ್ಕಾರದ ಉಪಕಾರ್ಯದರ್ಶಿ, (ಸಂ ಮತ್ತು ಕ) ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
12. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
13. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ), ಬೆಂಗಳೂರು.
14. ಪ್ರಧಾನ ಇಂಜಿನಿಯರ್, PRAMC, ಲೋಕೋಪಯೋಗಿ ಇಲಾಖೆ, ಕೆ.ಆರ್. ವೃತ್ತ, ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ವೆಬ್‌ಸೈಟ್ ನಲ್ಲಿ ಪ್ರಕಟಿಸಲು.
15. ಕಡತ / ಹೆಚ್ಚುವರಿ ಪ್ರತಿಗಳು.